ಸಂದರ್ಶನ: ಉಷಾ ನರಸಿಂಹನ್

ಚಿತ್ರಗಳು: ರಂಗನಾಥ್, ಮೈಸೂರು

## ಅನನ್ಯ ಸಂಶೋಧಕಿ ವೈ.ಸಿ. ಭಾನುಮತಿ ಜೊತೆ ಸಂವಾದ

# 'ಗ್ರಂಥ ಸಂಪಾದನೆಯ ಕಾಯಕದಲ್ಲಿ ಧನ್ಯತೆ ಇದೆ'

ಪ್ರಾಚೀನ ಹಸ್ತಪ್ರತಿಗಳಲ್ಲಿರುವ ಕವಿಪಠ್ಯಗಳನ್ನು ಪರಿಷ್ಕರಿಸಿ, ಅವನ್ನು ಸಹೃದಯರಿಗೆ ಸಿಗುವಂತೆ ಮಾಡುವ ಕಾಯಕದಲ್ಲಿ ತೊಡಗಿಕೊಂಡವರು ವೈ.ಸಿ. ಭಾನುಮತಿ. ನಾಲ್ಕು ದಶಕಗಳ ಕಾಲ ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಮತ್ತು ಗ್ರಂಥಸಂಪಾದನಾ ವಿಭಾಗದಲ್ಲಿ ಹಿರಿಯ ಸಂಶೋಧನಾ ಸಹಾಯಕರಾಗಿ ನಿವೃತ್ತರಾಗಿರುವ ಅವರು ಪ್ರಾಚೀನ ಕಾವ್ಯಗಳನ್ನು ಸ್ವತಂತ್ರವಾಗಿ ಸಂಪಾದಿಸಿ ತೆರೆಮರೆಯಲ್ಲೇ ಉಳಿದ ಸಂಶೋಧಕಿ. ಸಂಶೋಧಕರಿಗೆ ಉಪಯುಕ್ತವಾಗುವಂತೆ ದೊಡ್ಡ ಪ್ರಮಾಣದಲ್ಲಿ ಗ್ರಂಥ ಸಂಪಾದನೆ ಮಾಡಿದ ಅಪರೂಪದ ಮಹಿಳೆ ಕೂಡ.

ಮೈಸೂರು ವಿಶ್ವವಿದ್ಯಾಲಯದಿಂದ 'ಕನ್ನಡದಲ್ಲಿ ವರ್ಧಮಾನ ಸಾಹಿತ್ಯ' ಎಂಬ ಮಹಾಪ್ರಬಂಧಕ್ಕೆ ಪಿಎಚ್.ಡಿ. ಪದವಿಯನ್ನು ಪಡೆದಿರುವ ಅವರು 60ಕ್ಕೂ ಹೆಚ್ಚು ಮುಖ್ಯ ಕೃತಿಗಳನ್ನು ಸಂಪಾದಿಸಿದ್ದಾರೆ. ಭಾನುಮತಿ ಅವರ ಗ್ರಂಥಸಂಪಾದನಾ ಕಾರ್ಯ

